KADG420020562022

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳರವರ ನ್ಯಾಯಾಲಯ, ಹರಪನಹಳ್ಳಿ

ಉಪಸ್ಥಿತರುಃ

**ಶ್ರೀಮತಿ ಫಕೀರವ್ವ ಕೆಳಗೇರಿ,** *ಬಿ.ಎ.,ಎಲ್ ಎಲ್ ಬಿ.*
ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಹರಪನಹಳ್ಳಿ

**ಅಸಲ ದಾವಾ ನಂ. 232/2022**

ದಿನಾಂಕಃ 7 ನೇ ಆಗಸ್ಟ್ 2023

ವಾದಿ : ಶ್ರೀ ಎಂ ಸೋಮಪ್ಪ

(ವಕೀಲರಾದ ಶ್ರೀ.ಎಂ.ಎನ್.,ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

**ವಿರುದ್ಧ**

ಪ್ರತಿವಾದಿ : ಶ್ರೀ ಸಣ್ಣ ಸೋಮಪ್ಪ ಮತ್ತು ಇತರರು.

(ವಕೀಲರಾದ ಶ್ರೀ.ಎಂ.ಎ.ಎನ್ ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ.,)

**ಮಧ್ಯಂತರ ಅರ್ಜಿ ಸಂಖ್ಯೆ 1**

ಅರ್ಜಿದಾರ/ವಾದಿ : ಶ್ರೀ ಎಂ ಸೋಮಪ್ಪ

**ವಿರುದ್ಧ**

ಎದುರುದಾರರು/ಪ್ರತಿವಾದಿ : ಶ್ರೀ ಸಣ್ಣ ಸೋಮಪ್ಪ ಮತ್ತು ಇತರರು.

### ಮಧ್ಯಂತರ ಅರ್ಜಿಗಳ ಸಂಖ್ಯೆ-1 ರ ಮೇಲೆ ಆದೇಶ

ವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಕ್ರಮಾದೇಶ-39 ನಿಯಮ 1 ಮತ್ತು 2 ಜೊತೆ ಸಹ ಕಲಂ-151 ರ ರಡಿಯಲ್ಲಿ ಅರ್ಜಿ ಸಲ್ಲಿಸಿ, ವಾದಿ/ಅರ್ಜಿದಾರರ ದಾವಾ ಅರ್ಜಿ ಷೆಡ್ಯೂಲಿನಲ್ಲಿ ನಮೂದಿಸಿರುವ ಜಮೀನನ್ನು 1 ರಿಂದ 6 ನೇ ಪ್ರತಿವಾದಿಯಾಗಲಿ ಅಥವಾ

ಪ್ರತಿವಾದಿಗಳ ಪರ ಜಿ.ಪಿ.ಎ ಹೋಲ್ಡರ್ ಗಳಾಗಳಿ ಅವರ ಪರ ಇನ್ನಿತರೆ ಯಾರೇ ಆಗಲಿ ವಾದಿಯರ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸದಂತೆ 1 ರಿಂದ 6 ನೇ ಪ್ರತಿವಾದಿಯಾವರ ವಿರುದ್ಧ ಸದರಿ ದಾವೆಯ ಅಂತಿಮ ತೀರ್ಮಾನವಾಗುವವರೆಗೆ ಏಕ ಪಕ್ಷೀಯ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಆದೇಶಿಸಬೇಕೆಂದು ಅನುಮತಿ ಕೋರಿ ಈ ಅರ್ಜಿ ಸಲ್ಲಿಸಿರುತ್ತಾರೆ.

**2.** ಅರ್ಜಿದಾರರ/ವಾದಿಯು ತನ್ನ ಅರ್ಜಿಯ ಜೊತೆಗೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ, ಸದರಿ ದಾವೆಯಲ್ಲಿ ವಾದಿಯಾಗಿದ್ದು, ಇವರಿಗೆ ಸದರಿ ದಾವೆಯ ಎಲ್ಲಾ ಮಾಹಿತಿಗಳು ತಿಳಿದಿರುತ್ತದವೆ. ಇವರು ಸದರಿ ದಾವೆಯನ್ನು ಪ್ರತಿವಾದಿಯರ ವಿರುದ್ಧ ಮಾಲೀಕತ್ವ ಮತ್ತು ಹಕು ಘೋಷಣೆ ಹಾಗು ದಾವಾ ಷೆಡ್ಯೂಲ್ ಜಮೀನಿನ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸದಂತೆ ಪ್ರತಿವಾದಿಯವರ ವಿರದ್ದು ಶಾಶ್ವತ ನಿರ್ಭಂಧಕಾಜ್ಞೆ ಆದೇಶವನ್ನು ಕೋರಿ ಸಲ್ಲಿಸಿರುತ್ತೇವೆ.

**3.** ಸದರಿ ದಾವೆಯ 1 ಮತ್ತು 2 ನೇ ಪ್ರತಿವಾದಿಯರು ಗಂಡ ಹೆಂಡತಿಯವರಿದ್ದು, 3 ರಿಂದ 6 ನೇ ಪ್ರತಿವಾದಿಯರ ಮಕ್ಕಳಿರುತ್ತಾರೆ, ಸದರಿ ದಾವೆಯ ಇವರು ಹಾಗೂ ಪ್ರತಿವಾದಿಯವರು ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಯಾಗಿದ್ದು, ಸದರಿ ದಾವಾ ಷೆಡ್ಯೂಲ್ ಜಮೀನು ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ತೆಲಗಿ ಹೋಬಳಿ, ನಿಟ್ಟುರು ಕಂದಾಯ ಗ್ರಾಮದ ಸರ್ವೆ ನಂಬರ್ ನಂ 137/ಇ ವಿಸ್ತೀರ್ಣ 1 ಎಕರೆ 74 ಸೆಂಟ್ಸ್ ಜಮೀನು ದಾವಾ ಷೆಡ್ಯೂಲ್ ಜಮೀನಾಗಿರುತ್ತದೆ. ಸದರಿ ದಾವೆಯ ದಾವಾ ಷೆಡ್ಯೂಲ್ ಜಮೀನಿಗೆ ಸಂಬಂಧಿದಂತೆ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು, ತೆಲಗಿ ಹೋಬಳಿ ನಿಟ್ಟೂರು ಕಂದಾಯ ಗ್ರಾಮದ ಸರ್ವೆ ನಂರ್ 137/ಇ ಒಟ್ಟು ವಿಸ್ತೀರ್ಣ 7 ಎಕರೆ 36 ಸೆಂಟ್ಸ್ ಜಮೀನು ಇದ್ದು, ಸದರಿ ಜಮೀನಿನ ಪೈಕಿ 2 ಏಕರೆ 62 ಸೆಂಟ್ಸ್ ಜಮೀನು ಬಡಿಗೇರ ಕಾಳಿಂಗಪ್ಪ ಇವರ ಹೆಸರಿಗೆ ಎಂ.ಆರ್.ನಂಃ45/77-78 ರಂತೆ ಮುಟೇಶನ್ ಆದೇಶವಾಗಿ ಪಹಣಿ ನಮೂದಾಗಿ ಬಂದಿರುತ್ತದೆ ಅದೇ ರೀತಿ ಹರಪನಹಳ್ಳಿ ತಾಲ್ಲುಕು, ತೆಲಗಿ ಹೋಬಳಿ, ನಿಟ್ಟುರು ಕಂದಾಯ ಗ್ರಾಮದ ಸರ್ವೆ ನಂಬರ್ 137 ಇ ರಂತೆ ಮುಟೇಶೆನ್ ಆದೇಶವಾಗಿ ಪಹಣಿ ನಮೂದಾಗಿ

ಕಂದಾಯ ಗ್ರಾಮದ ಸರ್ವೆ ನಂಬರ್ 137-ಇ ಒಟ್ಟು ವಿಸ್ತೀರ್ಣ 7 ಎಕರೆ 36 ಸೆಂಟ್ಸ ಜಮೀನಿನ ಪೈಕಿ 3.00 ಎಕರೆ ಜಮೀನು ಅಗಸರ ಹುಮಪ್ಪ ಬನ್ ಸಂಕಪ್ಪನ ಹೆಸರಿನಲ್ಲಿದ್ದು, ಆನಂತರ ಹನುಮಪ್ಪ ಮತ್ತು ಇವರ ಹೆಂಡತಿ ಸಿದ್ದಮ್ಮ ಇವರ ಮರಣಾನಂತರ ಎಂ ಅರ್ ನಂ 14/1997-98 ರ ಪ್ರಕಾರ ಅಗಸರ ಹನುಮಪ್ಪ ಬಿನ್ ಸಂಕಪ್ಪ ಇವರಿಗೆ ಏಕೈಕ ಪುತ್ರಿಯಾದ ಶ್ರೀಮತಿ ಅಗಸರ ಸಂಕಮ್ಮ ಕೋಂ ಅಗಸರ ಸಣ್ಣ ಸೋಮಪ್ಪ ಇವರ ಹೆಸರಿಗೆ ಪೌತಿ ಖಾತಿ ಬದಲಾವಣೆಯಾಗಿ ಮುಟೇಶನ್ ಆದೇಶವಾಗಿ ಪಹಣಿ ಬಂದಿರುತ್ತದೆ, ಅದೇ ರೀತಿ ಹರಪನಹಳ್ಳಿ ತಾಲ್ಲೂಕು, ತೆಲಗಿ ಹೋಬಳಿ, ನಿಟ್ಟೂರು ಕಂದಾಯ ಗ್ರಾಮದ ಸರ್ವೆ ನಂಇರ 137/ಇ ಒಟ್ಟು 137-ಇ ಒಟ್ಟು ವಿಸ್ತೀರ್ಣ 7 ಎಕರೆ 36 ಸೆಂಟ್ಸ್ ಜಮೀನಿನ ಪೈಕಿ 1 ಎಕರೆ 74 ಸೆಂಟ್ಸ್ ಜಮೀನು ಅಗಸರ ಬುಳ್ಳಪ್ಪ ಇವರ ಹೆಸರಿಗೆ ಬಂದಿದ್ದು ಇವರ ಮರಣಾನಂತರ ಎಂ ಅರ್ ನಂ 47-2000-01 ಪ್ರಕಾರ ಅಗಸರ ಇದಿಯವ್ವ ಕೋ ಲೇಟ್ ಮಡಿವಾಳಪ್ಪ ಇವರ ಹೇಸರಿಗೆ ಪೌತಿ ಖಾತೆ ಬದಲಾವಣೆಯಾಗಿ ಮುಟೇಶನ್ ಆದೇಶವಾಗಿ ಪಹಣಿ ಬಂದಿರುತ್ತದೆ. ಇವರು ದಿನಾಂಕ 26.02.2001 ರಂದು ಹರಪನಹಳ್ಳಿ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಎಸ್ ಅರ್ ನಂ.1479-2000-01 ರಂತೆ ಸರ್ವೆ ನಂಬರ 137-ಇ ಒಟ್ಟು ವಿಸ್ತೀರ್ಣ 7 ಎಕರೆ 36 ಸೆಂಟ್ಸ್ಜಮೀನಿನ ಪೈಕಿ 1 ಎಕರೆ 74 ಸೆಂಟ್ಸ್ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಅಗಸರ ಸಂಕಮ್ಮ ಕೂಂ ಅಗಸರ ಸಣ್ಣ ಸೋಮಪ್ಪ ಇವರಿಂದ ಇವರು ಕ್ರಯಕ್ಕೆ ಕೊಂಡು ಕೊಂಡಿರುತ್ತಾರೆ, ಸದರಿ ಕ್ರಯ ಪತ್ರದಂತೆ ಎಂ.ಅರ್.ನಂ.37/2000-01 ರ ದಾವೆಯನ್ನು 3 ರಿಂದ 6 ನೇ ಪ್ರತಿವಾದಿಯರು 1 ಮತ್ತು 2 ನೇ ಪ್ರತಿವಾದಿಯರೊಂದಿಗೆ ಪರಸ್ಪರ ಶಾಮೀಲಾಗಿ ಸೃಷ್ಟಿಕೊಂಡಿರುವ ಕಟ್ಟು ಕತೆಯ ಅಧಾರದ ಮೇಲೆ ಇವರಗೆ ತೊಂದರೆಕೊಡಬೇಕೆಂಬ ದುರುದ್ದೇಶದಿಂದ 3 ರಿಂದ 6 ನೇ ಪ್ರತಿವಾದಿಯರು ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ವಾದಿಯ ವಕೀಲರ ಮೂಲಕ ಹಾಜರಾಗಿ ವಕಾಲತ್ತು ಸಲ್ಲಿಸಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯವರು ಯಾವುದೇ ಕಾನೂನು ಬಂದ್ಧ ಹಕ್ಕು ಅಧಿಕಾರ ಇಲ್ಲದಿದ್ದರೂ ಸಹ ಇವರ ಸ್ವಾಧೀನಕ್ಕೆ ಅಡ್ಡಿ ಪಡಿಸಲು ಪ್ರಯತ್ನಿಸಿರುತ್ತಾರೆ. ಆದ್ದರಿಂದ ಮಾನ್ಯ ಘನ ನ್ಯಾಯಾಲಯದ ಆದೇಶ ವಿನಾಃ ಇವರಿಗೆ ಬೇರೆ ದಾರಿ ತೋಚದೆ ಪ್ರಸ್ತುತ ದಾವೆಯನ್ನು ಮಾನ್ಯ ಘನ ನ್ಯಾಯಾಲಯದ ಮುಂದೇ

ಸಲ್ಲಿಸಿರುತ್ತಾರೆ. ಸದರಿ ದಾವೆಯ ಪ್ರತಿವಾದಿಯರು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಪ್ರಾಬಲ್ಯವುಳ್ಳವರಾಗಿದ್ದು ಪ್ರತಿವಾದಿಯರ ಕಾನೂನು ಬಾಹಿರ ಕೃತವನ್ನು ತಡೆಯಲು ಇವರು ಅಸಕ್ತನಿದ್ದು ಹಾಗೂ ದೌರ್ಜ್ಯನ್ಯವನ್ನು ತಡೆಹಿಡಿಯಲು ಸಾಧ್ಯವಿರುವುದಿಲ್ಲ ಪ್ರತಿವಾದಿಯರು ಇವರಿಗೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಕೆಲಸ ಕಾರ್ಯಗಳನ್ನು ಮಾಡಲು ಸದರಿ ದಾವೆಯು ಅಂತಿಮ ತೀರ್ಮಾನವಾಗುವವರಗೆ ಅಡ್ಡಿ ಅತಂಕ ತೊಂದರೆ ವಗ್ಯೆರೆ ಮಾಡಬಾರೆದೆಂದು ಶಾಶ್ವತ ನಿರ್ಭಂದಕಾಜ್ಞೆ ಆದೇಶ ಕೋರಿ ಪ್ರಸ್ತುತ ದಾವೆಯನ್ನು ಪ್ರತಿವಾದಿಯವರ ವಿರುದ್ಧ ಸಲ್ಲಿಸಿರುತ್ತೇನೆ.

**4.** ಪ್ರತಿವಾದಿ/ಎದುರುದಾರ ರವರು ತಕರಾರು ಸಲ್ಲಿಸಿ, ಅರ್ಜಿದಾರರು ತಮ್ಮ ಪ್ರಮಾಣಪತ್ರ ವಾದಿಯು ಈ ದಾವಾ ಸುಳ್ಳಿನಿಂದ ಕೂಡಿದ್ದು, ವಜಾ ಮಾಡಲು ಯೋಗ್ಯವಾಗಿರುತ್ತದೆ. ವಾದಿ ತನ್ನ ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯ ಮತ್ತು ಅಂಶಗಳನ್ನು ವಾದಿಯೆ ಸಾಬಿತು ಮಾಡತಕ್ಕದ್ದು, ವಾದಿ ಮತ್ತು ಪ್ರತಿವಾದಿಯವರ ಮೂಲ ಪುರುಷ ದಿವಂಗತ ಹನುಮಪ್ಪ ಎಂಬುವರಿರುತ್ತಾರೆ. ಸದರಿ ಹನುಮಂಪ್ಪನವರಿಗೆ ನಾಲ್ಕು ಜನ ಗಂಡು ಮಕ್ಕಳಿದ್ದು 1.ದಿವಂಗತ ಅಗಸರ ಸೋಮಪ್ಪ ಬಿನ್ ದಿ. ಹನುಮಪ್ಪ, 2.ಅಗಸರ ದೊಡ್ಡ ಬುಳ್ಳಪ್ಪ ಬಿನ್ ದಿ. ಹನುಮಪ್ಪ, 3. ದಿ.ಅಗಸರ ಸಣ್ಣ ಬುಳ್ಳಪ್ಪ ಬಿನ್ ದಿ. ಹನುಮಪ್ಪ 4. ಅಗಸರ ನಾಗಪ್ಪ ಬಿನ್ ದಿ. ಹನುಮಪ್ಪ. ಸದರಿಯವರು ಒಟ್ಟು ಕುಟುಂಬದ ಆಸ್ತಿಗಳನ್ನು ಮಾಡಿಕೊಂಡಿದ್ದು ಇರುತ್ತದೆ ಸದರಿ ಪಾಲು ವಿಭಾಗದಲ್ಲಿ ಹರಪನಹಳ್ಳಿ ತಾಲ್ಲೂಕು, ನಿಟ್ಟೂರು ಗ್ರಾಮದ ಸರ್ವೆ ನಂಇರ 137/ಇ ರಲ್ಲಿ 3 ಎಕರೆ ಜಮೀನು ಅಗಸರ ಸೋಮಪ್ಪ ಇವರ ಭಾಗಗಕ್ಕೆ ಬಂದಿದ್ದು ಇರುತ್ತದೆ. ಅದರೆ ಅಗಸರ ಸೋಮಪ್ಪ ಕೆಟ್ಟಚಟಗಳಿಗೆ ಬಲಿಯಾಗಿದ್ದರಿಂದ ಒಟ್ಟು ಕುಟುಂಬದ ಅಸ್ತಿಯನ್ನು ಉಳಿಸಲಿಕ್ಕಾಗಿ ಅಗಸರ ಹನುಮಂತಪ್ಪ ಇವರ ಹೆಸರಿಗೆ ಖಾತೆ ವರ್ಗಾಯಿಸಲಾಯಿತು. ಸದರಿ ಅಗಸರ ಹನುಮಂತಪ್ಪ ಇವರ ಹೆಸರಿಗೆ ಖಾತೆ ವರ್ಗಾಯಿಸಲಾಯಿತು. ಸದರಿ ಅಗಸರ ಹನುಮಂತಪ್ಪ ಈ 1ನೇ ಪ್ರತಿವಾದಿಯ ತಾಯಿಯು ಸಹೋದರನಾಗಬೇಕು. ಅದ್ದರಿಂದ ಸದರಿ ಆಸ್ತಿಯ ಖಾತೆಯು ಜಂಟಿಯಾಗಿ ಅಗಸರ ಬುಳ್ಳಪ್ಪ ಮತ್ತು ಅಗಸರ ಹನುಮಂತಪ್ಪ ಎಂದು ಕಂದಾಯ

ಇಲಾಖೆಯ ದಾಖಲೆಗಳಲ್ಲಿ ನಮೂದಾಗಿರುತ್ತದೆ. ಅಗಸರ ಪುಟ್ಟಮ್ಮ ಈ 1ನೇ ಪ್ರತಿವಾದಿಯರ ತಾಯಿಯಾಗಿದ್ದು ಸದರಿಯವರು ತಮ್ಮ ಜೀವಿತಾವಧಿಯಲ್ಲಿ ಸದರಿ 3 ಎಕರೆ ಜಮೀನಿನನ್ನು ಸ್ವಾಧೀನ ಹೊಂದಿ ಅನುಭಳಿಸಿಕೊಂಡು ಬಂದಿರುತ್ತಾರೆ ಅದ್ದರಿಂದ, ಪಹಣಿ ಕಾಲಂ 12 ರಲ್ಲಿ ಅಗಸರ ಪಟ್ಟಮ್ಮನವರ ಹೆಸರನ್ನು 1978-78 ರಿಂದ 1996-97 ರಲ್ಲಿ ತೋರಿಸಲಾಗಿದೆ.

ಮುಂದುವರೆದು, ದಿಃ ಅಗಸರ ಸೋಮಪ್ಪ ಅಗಸರ ಪುಟ್ಟಮ್ಮನವರೊಂದಿಗೆ ವಿವಾಹವಾಗಿದ್ದು ಸದರಿಯವರಿಗೆ ಈ ದಾವೆಯ 1ನೇ ಪ್ರತಿವಾದಿ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಜನಸಿರುತ್ತಾರೆ ಈ ದಾವೆಯ 1ನೇ ಪ್ರತಿವಾದಿ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಜನಿಸಿರುತ್ತಾರೆ, 1) ಶ್ರೀಮತಿ ಸೋಮವ್ವ, 2) ಶ್ರೀಮತಿ ಸಿದ್ದಮ್ಮ, 3) ಶ್ರೀಮತಿ ಕೆಂಚಮ್ಮ, 4) ಶೀಮತಿ ಶಾಂತಮ್ಮ. ಈ ದಾವೆಯ 1ನೇ ಪ್ರತಿವಾದಿಯು ಮೇಲ್ಕಂಡ ತನ್ನ ಅಕ್ಕ ಸೋಮವ್ವನ ಮಗಳಾದ ಶ್ರೀಮತಿ ಪುಟ್ಟಮ್ಮರವರೊಂದಿಗೆ ವಿವಾಹವಾಗಿದ್ದು ಇರುತ್ತದೆ ಸದರಿಯವರಿಗೆ ಈ ದಾವೆಯ 3 ರಿಂದ 6 ಪ್ರತಿವಾದಿಗಳು ಮಕ್ಕಳಿರುತ್ತಾರೆ. ಮುಂದುವರೆದು ಈ ದಾವೆಯ 1ನೇ ಪ್ರತಿವಾದಿಯು ತನ್ನ ಇನ್ನೊಬ್ಬ ಹಿರಿಯ ಅಕ್ಕನಾದ ಶ್ರೀಮತಿ ಸಿದ್ದಮ್ಮ ಕೋಂ ಅಗಸರ ಹನುಮಂತಪ್ಪ ಇವರ ಮಗಳಾದ ಸುಂಕಮ್ಮನೊಂದಿಗೂ ಸಹ ಮದುವೆಯಾಗಿರುತ್ತಾರೆ. ಮೇಲ್ಕಂಡ ಸೋಮವ್ವ ಹಾಗೂ ಸದ್ದಮ್ಮ ಹಾಲಿ ತೀರಿಕೊಂಡಿರುತ್ತಾರೆ.

ಮುಂದುವರೆದು, ಈ ಪ್ರತಿವಾದಿಯು ಹೇಳ ಬಯಸುವುದೇನಂದರೆ ಹರಪನಹಳ್ಳಿ

ತಾಲ್ಲುಕು ನಿಟ್ಟೂರು ಕಂದಾಯ ಗ್ರಾಮದ ಸರ್ವೆ.ನಂ.137/ಇ ಒಟ್ಟು ವಿಸ್ತಿರ್ಣ 7 ಎಕರೆ 36 ಸೆಂಟ್ಸ್ಜ ಜಮೀನಿನ ಪೈಕಿ 1 ಎಕರೆ 74 ಸೆಂಟ್ಸ್ ಜಮೀನು ಇದ್ದು 1978-79 ರಿಂದಲೂ ಸಹ ಅಗಸರ ಬುಳ್ಳಪ್ಪ, ಅಗಸರ ಹನುಮಂತಪ್ಪ ಮತ್ತು ಬಡಿಗೇರ ಕಾಳಪ್ಪನವರ ಹೆಸರಿಗೆ ಪಹಣಿಯಲ್ಲಿ ನಮೊದಾಗಿರುತ್ತದೆ. ಇದರಲ್ಲಿ 2 ಎಕರೆ 62 ಸೆಂಟ್ಸ್ ಜಮೀನು ಬಡಿಗೇರ

ಕಾಣಪ್ಪನವರಿಗೆ ಸೇರಿದ ಆಸ್ತಿಯಾಗಿದ್ದು ಉಳಿದ 4 ಎಕರೆ 74 ಸೆಂಟ್ಸ್ ಜಮೀನು ವಾದಿ ಮತ್ತು ಪ್ರತಿವಾದಿಯವರ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ.

ಮುಂದುವರೆದು, ಅಗಸರ ದೊಡ್ಡ ಬುಳ್ಳಪ್ಪ, ಅಗಸರ ಹನುಮಂತಪ್ಪ ತೀರಿಕೊಂಡ ನಂತರ 1 ಎಕರೆ 74 ಸಂಟ್ಸ್ ಜಮೀನಿನ ಖಾತೆಯನ್ನು ಇರಿಯಮ್ಮ ಕೋಂ ಮಡಿವಾಳಪ್ಪ ಬಿನ್ ಅಗಸರ ದೊಡ್ಡ ಬುಳ್ಳಪ್ಪ ಎಂದು ನಮೂದಾಗಿರುತ್ತದೆ. ಸದರಿಯವರು ತೀರಿಕೊಂಡ ನಂತರ 1 ಎಕೆರ 74 ಸೆಂಟ್ಸ್ ಜಮೀನು ಈ ದಾವೆಯ ವಾದಿಯ ಹೆಸರಿಗೆ ಖಾತೆಯನ್ನು ವರ್ಗಾಯಿಸಲಾಗಿರುತ್ತದೆ.

ಮುಂದುವರೆದು, ಮೇಲ್ಕಂಡ ಪ್ಯಾರದಲ್ಲಿ ಹೇಳಿದಂತೆ 1 ಎಕರೆ 74 ಸೆಂಟ್ಸ್ ಜಮೀನು ವಾದಿಯ ಹೆಸರಿಗೆ ಖಾತೆಯಾಗಿ ಉಳಿದ 3 ಎಕರೆ ಜಮೀನು ಅಗಸರ ಹನುಮಂತಪ್ಪನವರ ಹೆಸರಿಗೆ ಕಂದಾಯ ಇಲಾಖೆಯ ದಾಖಲೆಯಲ್ಲಿ ತೋರಿಸಲಾಗಿದೆ. ತದನಂತರ ಸದರಿ ಹನುಮಂತಪ್ಪನವರು ತೀರಿಕೊಂಡು ನಂತರ ಈ ದಾವೆಯ 1ನೇ ಪ್ರತಿವಾದಿಯ ಸಹಮತಿಯೊಂದಿಗೆ ಮೇಲ್ಕಂಡ 3 ಎಕರೆ ಜಮೀನನ್ನು 1ನೇ ಪ್ರತಿವಾದಿಯ 2ನೇ ಹೆಂಡತಿಯಾದ ಶ್ರೀಮತಿ ಸಂಕಮ್ಮ ಇವರ ಹೆಸರಿಗೆ ಖಾತೆಯ ವರ್ಗಾವಾಣೆಯಾಗಿದೆ. ಮೇಲ್ಕಂಡ ಕಾರಣಗಳಿಗಾಗಿ ಅಗಸರ ಹನುಮಂತಪ್ಪನಿಗೆ ಮೇಲ್ಕಂಡ 3 ಎಕರೆ ಜಮೀನಿನಲ್ಲಿ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ. ಸದರಿ ಆಸ್ತಿಯ ಮಾಲೀಕರಾಗಿರಲಿಲ್ಲ ಸದರಿಯವರು ಆಸ್ತಿಯ ದೇಖಿ-ರೇಖಿ ಮಾಡಿಕೊಂಡು ಹೋಗುತ್ತಿದ್ದರು. ಅದ್ದರಿಂದಲೇ, ಸಂಕಮ್ಮನ ಹೇಸರಿಗೆ 3 ಎಕರೆ ಜಮೀನಿನನ್ನು ಖಾತೆ ವರ್ಗಾಯಿಸುವಾಗ ಈ ದಾವೆಯ 1ನೇ ಪ್ರತಿವಾದಿಯ ಸಹಮತಿಯನ್ನು ತೆಗೆದುಕೊಂಡು ಸಂಕಮ್ಮನವರ ಹೆಸರಿಗೆ ಎಂ ಅರ್ ಸಂಖ್ಯೆ 14/1997-98 ರ ಪ್ರಕಾರ ಖಾತೆ ವರ್ಗಾವಣೆಯಾಗಿರುತ್ತದೆ. ಆದ್ದರಿಂದ ಸದರಿ ಸಂಕಮ್ಮನು ಸಹ ಮೇಲ್ಕಂಡ 3 ಎಕರೆಯ ಸಂಪೂರ್ಣ ಮಾಲೀಕರಾಗಿರುವುದಿಲ್ಲ. ಅದ್ದರಿಂದ ಸಂಕಮ್ಮ ಹಾಗೂ ಈ ಕೇಸಿನ 1 ರಿಂದ 6 ಪ್ರತಿವಾದಿಗಳು ಸದರಿ 3 ಎಕರೆ ಜಮೀನಿನಲ್ಲಿ ಸಮಾನಾದ ಹಕ್ಕು ಅಧಿಕಾರವನ್ನು ಹೊಂದಿರುತ್ತಾರೆ.

ಮುಂದುವರೆದು, ಈ ಕೇಸಿನ ವಾದಿ ಮೇಲ್ಕಂಡ ಸಂಕಮ್ಮಳೊಂದಿಗೆ ಶಾಮಿಲಾಗಿ 1 ರಿಂದ 6 ನೇ ಪ್ರತಿವಾದಿಯವರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ 3 ಎಕರೆ ಜಮೀನಿನಲ್ಲಿ 1 ಎಕರೆ 74 ಸೆಂಟ್ಸ್ ಜಮೀನನ್ನು ವಾದಿಯ ಹಸರಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೆ ವರ್ಗಾಯಿಸಿಕೊಂಡಿರುತ್ತಾರೆ. ಮುಂದುವರೆದು ಮೇಲ್ಕಂಡ ಸಂಕಮ್ಮ ಇವರು ಒಟ್ಟು ಕುಟುಂಬದ ಅದಾಯದಿಂದ ವಾದಿಯಿಂದ 1 ಎಕರೆ 74 ಸೆಂಟ್ಸ್ ಜಮೀನನ್ನು ಖರೀದಿಸಿರುತ್ತಾರೆ ಸದರಿ ಜಮೀನನ್ನು ಖರಿದಿಸಲು ಸದರಿ ಸಂಕಮ್ಮನಿಗೆ ಯಾವುದೇ ಸ್ವತಂತ್ರವಾದ ಆದಾಯವಿರುವುದಿಲ್ಲ. ಅದ್ದರಿಂದ ಮೇಲ್ಕಂಡ 3 ಎಕರೆ ಜಮೀನು ಈ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ.

ಮುಂದುವರೆದು ಮೇಲ್ಕಂಡ 3 ಎಕರೆ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಸದರಿ ಆಸ್ತಿಯನ್ನು ಮೇಲ್ಕಂಡ ಸಂಕಮ್ಮ ಇವರು ತನ್ನ ಮಗಳಾದ ಶ್ರೀಮತಿ ಚೌಡಮ್ಮ ಕೋಂ ಮಡಿವಾಳದ ಗೀರಿಶ್ ಇವರ ಹೆಸರಿಗೆ ನೊಂದಾಯಿತ ದಾನ ಪತ್ರವನ್ನು ದಿನಾಂಕ 28.01.2022 ರಂದು ನೊಂದಾಯಿಸಿದ್ದು. ಈ ಪ್ರತಿವಾದಿಯರ ಹಕ್ಕು ಮತ್ತು ಅಧಿಕಾರವನ್ನು ಮೊಟಕುಗೊಳಿಸಲು ಸೃಷ್ಠಿಸಿದಂತಹ ದಾಖಾಲಾತಿಯಾಗಿರುತ್ತದೆ. ಸದರಿ ದಾನಪತ್ರವು ಈ ಪ್ರತಿವಾದಿಗಳ ಹಕ್ಕು ಅಧಿಕಾರಕ್ಕೆ ಯಾವುದೇ ಭಾದಕವಾಗಿರುವುದಿಲ್ಲ.

ಮುಂದುವರೆದು ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ 3 ರಿಂದ 6 ಪ್ರತಿವಾದಿಗಳು ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳು ಈ ಕೇಸಿನ ವಾದಿ ಹಾಗೂ ಮೇಲ್ಕಂಡ ಸಂಕಮ್ಮ ಇವರ ಮಗಳು ಚೌಡಮ್ಮ ರವರ ವಿರುದ್ಧ ಅಸಲು ದಾವಾ ಸಂಖ್ಯೆ 169-2022 ದಾವೆಯನ್ನು ಸಲ್ಲಿಸಿ ಪಾಲುವಿಭಾಗ ಕೋರಿ ನ್ಯಾಯಯುತವಾಗಿ ಕಾನೂನು ಪ್ರಕಾರ ಹೋರಾಟವನ್ನು ನಡೆಸಿರುತ್ತಾರೆ. ಇಂದಿಗೂ ಈ ಕೇಸಿನ 1 ರಿಂದ 6 ನೇ ಪ್ರತಿವಾದಿಗಳು ಮೇಲ್ಕಂಡ 3 ಎಕರೆ ಜಮೀನಿನಲ್ಲಿ ಸ್ವಾದೀನಾನುಭವ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ ಹಾಗೂ ಸದರಿ ಜಮೀನಲ್ಲಿ 1 ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ.

ಮುಂದುವರೆದು, ಪ್ರತಿವಾದಿಯವರು ಕೇಳಿಕೊಳ್ಳುವುದೇನೆಂದರೆ ವಾದಿಯ ದಾವೆಯು ಯಾವುದೇ ವ್ಯಾಜ್ಯ ಕಾರಣ ಇಲ್ಲದೆ ಸಲ್ಲಿಸಿರುವಂತಹ ದಾಖಲೆಯಾಗಿದ್ದು ಅವಶ್ಯಕ ಪಕ್ಷಗಾರರನ್ನು. ಈ ದಾವೆಯಲ್ಲಿ ಸೇರಿಸಲಾಗಿಲ್ಲ ಅದ್ದರಿಂದ ವಾದಿಯ ಈ ದಾವೆಯ ವಜಾ ಅಗಲು ಯೋಗ್ಯವಾಗಿರುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥನೆ ಮಾಡಿರುತ್ತಾರೆ.

**5.** ವಾದವನ್ನು ಆಲಿಸಿರುತ್ತೇನೆ. ದಾಖಲೆಗಳನ್ನು ಪರಿಶೀಲಿಸಿದ್ದೇನೆ. ನನ್ನ ಪರಿಗಣನೆಗೆ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

1. ಅರ್ಜಿದಾರರು/ವಾದಿಗಳು ತನ್ನ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಕೇಸು ಇದೆಯೆಂದು ತೋರಿಸಿ ಕೊಡುವರೇ?
2. ಅರ್ಜಿದಾರರ/ವಾದಿಗಳು ತನ್ನ ಪರವಾಗಿ ಅನುಕೂಲತೆಯ ಸಂತುಲನೆ ಇದೆಯೆಂದು ತೋರಿಸಿ ಕೊಡುವರೇ?
3. ಅರ್ಜಿದಾರರು/ವಾದಿಗಳು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ತನಗೆ ತುಂಬಲಾರದ ನಷ್ಟ, ಕಷ್ಟ ಮತ್ತು ತೊಂದರೆ ಉಂಟಾಗುತ್ತದೆ ಎಂದು ತೋರಿಸಿ ಕೊಡುವರೆ?
4. ಯಾವ ಆದೇಶ?

6. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ನಂ.1 ರಿಂದ 3 ಃ ಸಕಾರಾತ್ಮಕವಾಗಿ
ಅಂಶ ನಂ.4 ಃ ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿಃ

**ಕಾರಣಗಳು**

7. **ಅಂಶ ನಂ.1 ರಿಂದ 3:** ಸದರಿ ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿರುವುದರಿಂದ ಮತ್ತು ಸಂಗತಿಗಳ ಪುನರಾವರ್ತನೆಯಾಗುವುದನ್ನು ತಡೆಯಲು ಅವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

**8**. ವಾದಿಯು ತನ್ನ ಮೆಲ್ನೂಟದ ದಾವೆಯನ್ನು ಸಾಭಿತಪಡಿಸಲು ಒಟ್ಟು 8 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ದಾವ ಆಸ್ತಿಗೆ ಸಂಬಂದಿಸಿದ ನಿಟ್ಟುರು ಗ್ರಾಮದ ಸ.ನಂ. 137-ಇ ಒಟ್ಟು ವಿಸ್ತೀರ್ಣ 7 ಎಕರೆ 36 ಸೆಂಟ್ಸ್ ಜಮೀನಿನ 1968-69 ರಿಂದ 2001-02 ರವರಿಗಿನ ಕೈಬರಹದ ದೃಡಿಕೃತ ಪಹಣೆ ಪ್ರತಿಗಳು ಅಗಿರುತ್ತವೆ, ಮುಟೇಶನ್ ನಂ 14/1997-98 ನೇದ್ದರ ನಕಲು ಪ್ರತಿ, ದಿನಾಂಕ 26.01.2001 ತಾರಿಕನ ನೂಂದಾಯಿತ ಕ್ರಯ ಪ್ರತ್ರವನ್ನು ಹಾಜರುಪಡಿಸಿರುತ್ತಾರೆ. ಸರ್ವ ನಂ 137/ಇ ಸಂಬಂದಿಸಿದ ಪಹಣಿ ಹಾಜರು ಪಡಿಸಿರುತ್ತಾರೆ, ಆಕಾರಬಂಧ ಮತ್ತು ಸ್ಕೆಚ್‌ನ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ, ಸರ್ವೆ ನಂ 137/ಇ-1 ಸಂಬಂದಿಸಿದ 2022-23 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯರು ತಮ್ಮ ಪರವಾಗಿ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

9. ವಾದಿಯ ವಾದ ಪತ್ರ ಮತ್ತು ಪ್ರತಿವಾದಿಯರ ಪ್ರತಿವಾದ ಪತ್ರ ಹಾಗೂ ಅವರು ಹಾಜರುಪಡಿಸಿದ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ, ವಾದಿಯು ದಾವೆಯನ್ನು ಘೋಷನಾತ್ಮಕ ಮತ್ತು ಶಾಶ್ವತ ನಿರ್ಬಂದಕಾಜ್ಞೆ ಆದೇಶ ಕೋರಿ ಸಲ್ಲಿಸಿದ್ದು ಇರುತ್ತದೆ. ವಾದಿಯು ದಾವಾ ಶೆಡ್ಯೂಲ್ ನಲ್ಲಿ ನಮೂದಿಸಿದ ಆಸ್ತಿಯನ್ನು ದಿನಾಂಕ 26.2.2018 ರಂದು ಸರ್ವೇ ನಂಬರ್ 137/ಇ ಒಟ್ಟು ಕ್ಷೇತ್ರ 3 ಎಕರೆ ಜಮೀನಿನ ಪೈಕಿ 1 ಎಕರೆ 74 ಸೆನ್ಸ್ ಜಮೀನನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಅಗಸರ ಸಂಕಮ್ಮ ಗಂಡ ಅಗಸರ ಸಣ್ಣ ಸೋಮಪ್ಪ ಇವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದು, ಸದರಿ ಕ್ರಯವಾದ

ದಿನಾಂಕದಿಂದ ಇಂದಿನವರೆಗು ವಾದಿಯು ಸ್ವಾದಿನದಲ್ಲಿರುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ 3 ರಿಂದ 6 ನೇ ಪ್ರತಿವಾದಿಯರು, 1 ಮತ್ತು 2 ನೇ ಪ್ರತಿವಾದಿಯರೊಂದಿಗೆ ಪರಸ್ಪರ ಶಾಮೀಲಾಗಿ ಸದರಿಯವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಆಸಲು ದಾವಾ ನಂ 169/2022 ದಾವೆಯನ್ನು ದಾಖಲಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಪ್ರತಿವಾದಿಯರರು ಯಾವುದೇ ಕಾನುಬದ್ದ ಹಕ್ಕು ಅಧಿಕಾರ ಇಲ್ಲದ್ದಿದ್ದರು ವಾದಿಯ ಸ್ವಾಧಿನಕ್ಕೆ ಅಡ್ಡಿಪಡಿಸಿರುತ್ತಾರೆ. ಆದ್ದರಿಂದ ವಾದಿಯು ಈ ದಾವೆಯನ್ನು ದಾಖಲಿಸಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ ಎಂದು ಹೇಳಿರುತ್ತಾರೆ.

10. ಪ್ರತಿವಾದಿಯರು ಹೇಳುವುದೇನೆಂದರೆ, ಸುಮಾರು ವರ್ಷಗಳ ಹಿಂದೆ ವಾದಿ ಮತ್ತು ಪ್ರತಿವಾದಿಗಳ ಮೂಲ ಪುರಷ ಹನುಮಂತಪ್ಪನ ನಾಲ್ಕು ಜನ ಗಂಡು ಮಕ್ಕಳ ನಡುವೆ ಪಾಲು ವಿಭಾಗ ಅಗಿದ್ದು, ಸದರಿ ಪಾಲು ವಿಭಾಗದಲ್ಲಿ ಸರ್ವೆ.ನಂ.137-ಇ ಕ್ಷೇತ್ರ 3 ಎಕೆರೆ ಜಮೀನು ಅಗಸರ ಸೋಮಪ್ಪ ಇತನ ಭಾಗಕ್ಕೆ ಬಂದಿದ್ದು ಅಗಸರ ಸೋಮಪ್ಪ ಇತನು ಕೆಟ್ಟಚಟಗಳಿಂದ ಬಲಿಯಾಗಿದ್ದರಿಂದ ಒಟ್ಟು ಕುಟುಂಬದ ಆಸ್ತಿಯನ್ನು ಉಳಿಸಲಿಕ್ಕೆ ಆಗಸರ ಹನುಮಂತಪ್ಪ ಇತನ ಹೇಸರಿಗೆ ಖಾತೆ ವರ್ಗಾವಣೆ ಮಾಡಿದ್ದು, ಸದರಿ ಆಸ್ತಿಯ ಖಾತೆಯು ಜಂಟಿಯಾಗಿ ಆಗಸರ ಬುಳ್ಳಪ್ಪ ಮತ್ತು ಅಗಸರ ಹನುಮಂತಪ್ಪ ಕಂದಾಯ ದಾಖಲಾತಿಗಳಲ್ಲಿ ದಾಖಲಾಗಿರುತ್ತದೆ. ಸದರಿ ಅಗಸರ ಹನುಮಂತಪ್ಪ ಇತನು 1 ನೇ ಪ್ರತಿವಾದಿಯ ತಾಯಿಯ ಸಹೊದರನ ಅಗಿದ್ದು ಇರುತ್ತದೆ. ಆಗಸರ ಸೋಮಪ್ಪ ಅತನ ಮೊದಲನೆ ಹಂಡತಿ ಅಗಸರ ಪುಟ್ಟಮ್ಮ ಅಗಿದ್ದು, ಸೋಮಪ್ಪನ ಹಿರಿಯ ಅಕ್ಕನಾದ ಸಿದ್ದಮಳ ಏಕೈಕ ಮಗಳಾದ ಸಂಕಮ್ಮ ಇವಳು ಎರಡನೇ ಹೆಂಡತಿ ಇರುತ್ತಾಳೆ. ಹರಪನಹಳ್ಳಿ ತಾಲೂಕು ನಿಟ್ಟೂರು ಕಂದಾಯ ಗ್ರಾಮದ ಸರ್ವೆ ನಂ.137/E ಒಟ್ಟು ಅಳತೆ 7.36 ಎಕರೆ ಜಮೀನು 1978 -79 ರಿಂದಲೂ ಸಹ ಅಗಸರ ಬುಳ್ಳಪ್ಪ, ಅಗಸರ ಹನುಮಂತಪ್ಪ ಮತ್ತು ಬಡಿಗೇರ್ ಕಾಳಿಂಗಪ್ಪನವರ ಹೆಸರಿನಲ್ಲಿ ಪಹಣಿಯಲ್ಲಿ ನಮೂದಾಗಿದ್ದು. ಇದರಲ್ಲಿ 2 ಎಕರೆ 62 ಸೆನ್ಸ್ ಜಮೀನು

ಬಡಿಗೇರ್ ಕಾಳಿಂಗಪ್ಪನವರಿಗೆ ಸೇರಿದ ಆಸ್ತಿಯಾಗಿದ್ದು, ಉಳಿದ 4 ಎಕರೆ 74 ಸೆಂಟ್ಸ್ ಜಮೀನು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಅಗಸರ ದೊಡ್ಡಬುಳ್ಳಪ್ಪ ಮತ್ತು ಅಗಸರ ಹನುಮಂತಪ್ಪ ತೀರಿಕೊಂಡ ನಂತರ ಕ್ಷೇತ್ರ 1.74 ಎಕರೆ ಜಮೀನಿನ ಖಾತೆಯನ್ನು ಹಿರಿಯಮ್ಮ ಕೋಂ ಮಡಿವಾಳಪ್ಪ ಬಿನ್ ಅಗಸರ ದೊಡ್ಡಬುಳ್ಳಪ್ಪ ಎಂದು ನಮೂದಾಗಿದ್ದು, ಸದರಿಯವರು ತೀರಿಕೊಂಡ ನಂತರ 1.74 ಎಕರೆ ಜಮೀನು ಈ ದಾವೇಯ ವಾದಿ ಹೆಸರಿನಲ್ಲಿ ಖಾತೆಯಾಗಿದ್ದು, ಉಳಿದ 3 ಎಕರೆ ಜಮೀನು ಅಗಸರ ಹನುಮಂತಪ್ಪನವರ ಹೆಸರಿಗೆ ಕಂದಾಯ ಇಲಾಖೆಯ ದಾಖಲೆಯಲ್ಲಿ ದಾಖಲೆಯಾಗಿದ್ದು, ಸದರಿ ಹನುಮಂತಪ್ಪನವರು ತೀರಿಕೊಂಡ ನಂತರ 1ನೇ ಪ್ರತಿವಾದಿಯ ಸಹಮತಿಯೊಂದಿಗೆ 3 ಎಕರೆ ಜಮೀನನ್ನು 1ನೇ ಪ್ರತಿವಾದಿಯ ಹೆಂಡತಿಯಾದ ಸಂಕಮ್ಮ ಇವಳ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ, ಸದರಿ 3 ಎಕರೆ ಜಮೀನಿನಲ್ಲಿ ಹನುಮಂತಪ್ಪನಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. ಸದ್ರಿ ಆಸ್ತಿಯ ದೇಖ-ರಿಕೆ ನೋಡಿಕೊಂಡು ಹೋಗುತ್ತಿದ್ದನು, 1ನೇ ಪ್ರತಿವಾದಿಯ ಸಮ್ಮತಿಯ ಮೇರೆಗೆ ಸಂಕಮ್ಮಳ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿದ್ದರಿಂದ ಸದರಿ ಸಂಕಮ್ಮ ಇವಳಿಗಿ ಕ್ಷೇತ್ರ 3 ಎಕರೆ ಜಮೀನಿನ ಮೇಲೆ ಸಂಪೂರ್ಣ ಮಾಲಿಕತ್ವದ ಹಕ್ಕು ಇರುವುದಿಲ್ಲ. ಸಂಕಮ್ಮ ಹಾಗೂ 1 ರಿಂದ 6 ನೇ ಪ್ರತಿವಾದಿಗಳು ಸದರಿ 3 ಎಕರೆ ಜಮೀನಿನಲ್ಲಿ ಸಮನಾದ ಹಕ್ಕು ಅಧಿಕಾರವನ್ನು ಹೊಂದಿರುತ್ತಾರೆ. ವಾದಿಯು ಸಂಕಮ್ಮಳೊಂದಿಗೆ ಶಾಮಿಲಾಗಿ 1 ರಿಂದ 6ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ 3 ಎಕರೆ ಜಮೀನಿನಲ್ಲಿ 1.74 ಎಕರೆ ಜಮೀನನ್ನು ವಾದಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ, ಸದರಿ ಸಂಕಮ್ಮ ಇವಳು ಒಟ್ಟು ಕುಟುಂಬದ ಆದಾಯದಿಂದ ವಾದಿಯಿಂದ ಕ್ಷೇತ್ರ 1.74 ಎಕರೆ ಜಮೀನನ್ನು ಖರೀದಿಸಿರುತ್ತಾರೆ. ಸದರಿ 3 ಎಕರೆ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಸಂಕಮ್ಮ ಇವರು ತನ್ನ ಮಗಳಾದ ಚೌಡಮ್ಮ ಗಂಡ ಮಡಿವಾಳರ ಗಿರೀಶ್ ಇವರ ಹೆಸರಿಗೆ ನೋಂದಾಯಿತ ದಾನಪತ್ರವನ್ನು ದಿನಾಂಕ 28.1.2022 ರಂದು ಮಾಡಿಕೊಟ್ಟಿದ್ದು ಇರುತ್ತದೆ

ಎಂದು ಹೇಳುತ್ತಾರೆ ಅ ರೀತಿ ದಾಖಲೆಯನ್ನು ಸೃಷ್ಟಿಸುವ ಅಧಿಕಾರ ಸಂಕಮ್ಮಳಿಗೆ ಇರುವುದಿಲ್ಲ.

11. ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕಾದರೆ ವಾದಿಯು ಮೇಲ್ನೋಟಕ್ಕೆ ದಾವಆಸ್ತಿಯ ಸ್ವಾಧೀನದಲ್ಲಿ ಇದ್ದಾನೆ ಎಂಬುದನ್ನು ಗಮನಿಸಬೇಕಾಗುತ್ತದೆ. ವಾದಿಯು ದಾವಾಸ್ತಿಯನ್ನು ನೊಂದಾಯಿತ ಕ್ರಯ ಪತ್ರದ ಮುಖಾಂತರ ಖರಿದಿಸಿರುತ್ತೆನೆ ಎಂದು ನೊಂದಾಯಿತ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತೆಯನ್ನು ಗಮನಿಸಲಾಗಿ, ವಾದಿಯು ದಿನಾಂಕ 24.02.2001 ರಂದು ಸರ್ವೆ ನಂ. 137/ಇ ಕ್ಷೇತ್ರ 1.74 ಎಕರೆ ಜಮೀನನ್ನು ಅಗಸರ ಸಂಕಮ್ಮ ಇವಳಿಂದ ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಸದರಿ ದಾಖಲೆಯ ಅಧಾರದ ಮೇಲೆ ವಾದಿಯ ಹೆಸರು ಎಂ.ಅರ್.ನಂ.37/2000-2001 ರನ್ವಯ ಕಂದಾಯ ದಾಖಲಾತಿಗಳಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. 2022-2023 ನೇ ಸಾಲೀನ ಪಹಣಿಯನ್ನು ಗಮನಿಸಿದಾಗ ವಾದಿಯ ಹೆಸರು ದಾವಾ ಆಸ್ತಿಗೆ ಸಂಬಂದಿಸಿದಂತೆ ದಾಖಲಾಗಿರುವುದು ಕಂಡುಬರುತ್ತದೆ. ಪ್ರತಿವಾದಿಗಳ ಪ್ರಕಾರ ಸರ್ವೆ ನಂ 137/ಇ ಒಟ್ಟು ಕ್ಷೇತ್ರ 7.36 ಎಕರೆ ಪೈಕಿ 4.74 ಎಕರೆ ಜಮೀನು ವಾದಿ ಮತ್ತು ಪ್ರತಿವಾದಿಯವರ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಸಂಕಮ್ಮಳಿಗೆ ಮೇಲೆ ಹೇಳಿದ ಒಟ್ಟು ಕುಟುಂಬದ ಆಸ್ತಿಯಲ್ಲಿ 1.74 ಎಕರೆ ಜಮೀನನ್ನು ವಾದಿಗೆ ಮಾರಟ ಮಾಡಲು ಮತ್ತು ಕ್ಷೇತ್ರ 3 ಎಕರೆ ಜಮೀನನ್ನು ತನ್ನ ಮಗಳಾದ ಚೌಡಮ್ಮಳಿಗೆ ದಿನಾಂಕ 28.01.2022 ರಂದು ನೊಂದಾಯಿತ ದಾನ ಪತ್ರದ ಮುಖಾಂತರ ಹಸ್ತಾಂತರಿಸುವ ಸ್ವತಂತ್ರ ಅಧಿಕಾರ ಸಂಕಮ್ಮಳಿಗೆ ಇರುವುದಿಲ್ಲ.

12. 1968-69 ರಿಂದ 1978-79 ರವರಿಗಿನ ಪಹಣಿಯನ್ನು ಗಮನಿಸಿದಾಗ ಅಗಸರ ಬುಳ್ಳಪ್ಪ ಹನುಮಂತಪ್ಪ ಮತ್ತು ಬಡಿಗೇರ ಕಾಳಿಂಗಪ್ಪ ತಂದೆ ನಿಂಗಪ್ಪ ಇವರ ಹೆಸರು

ಜಂಟಿಯಾಗಿ ಕ್ಷೇತ್ರ 7.36 ಎಕರೆಗೆ ಸಂಬಂದಿಸಿದಂತೆ ದಾಖಲೆಯಾಗಿರುವುದು ಕಂಡುಬರುತ್ತದೆ ಮತ್ತು ತಳವಾರ ಕರಿಯಪ್ಪ ನಿಟ್ಟುರು ಮತ್ತು ಮಗ ಹನುಮಂತಪ್ಪ ಇತನ ಹೆಸರು ಕಡಿಮೆ ಮಾಡಿರುವುದು ಕಂಡುಬರುತ್ತದೆ. 1977-78 ನೇ ಸಾಲಿನಲ್ಲಿ ಅಗಸರ ಪುಟ್ಟವ್ವ ಬಡಿಗೇರ ಕಾಳಿಂಗಪ್ಪ ಇವರ ಹೆಸರು ಸಾಗುವಳಿದಾರರ ಕಲಂನಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. 1978-79 ರಿಂದ 1982-83 ರವರಿಗಿನ ಕೈಬರಹ ಪಹಣಿಯಲ್ಲಿ ಅಗಸರ ಬುಳ್ಳಪ್ಪ ತಂದೆ ಹನುಮಂತಪ್ಪ ಮತ್ತು ಬಡಿಗೇರ ಕಾಳಿಂಗಪ್ಪ ತಂದೆ ನಿಂಗಪ್ಪ ಇವರ ಹೆಸರು ಮಾಲಿಕರ ಕಲಂನಲ್ಲಿ ದಾಖಾಲೆಯಾಗಿದ್ದು, ಆಗಸರ ಪುಟ್ಟವ ಬಡಿಗೇರ ಕಾಳಿಂಗಪ್ಪ ಇವರ ಹೆಸರು ಸಾಗುವಳಿದಾರರ ಕಲಂನಲ್ಲಿ ದಾಖಾಲೆಯಾಗಿರುವುದು ಕಂಡುಬರುತ್ತದೆ. ಸನ್ 1983-84 ರಿಂದ 1988-89 ಮತ್ತು 1988-89 ರಿಂದ 1993-94 ರವರಗಿನ ಪಹಣಿಯನ್ನು ಗಮನಿಸಿದಾಗ, ಅಗಸರ ಬುಳ್ಳಪ್ಪ ಹನುಮಂತಪ್ಪ ಬಡಿಗೇರ ಕಾಳಿಂಗಪ್ಪ ಇವರ ಹೆಸರು ಮಾಲಿಕರ ಕಾಲಂನಲ್ಲಿ ದಾಖಲಾಗಿದ್ದು, ಅಗಸರ ಪುಟ್ಟವ್ವ, ಬಡಿಗೇರ ಕಾಳಿಂಗಪ್ಪ ಇವರ ಹೆಸರು ಸಾಗುವಾಳಿದಾರರ ಕಲಂನಲ್ಲಿ ದಾಖಲೆ ಇರುವುದು ಕಂಡುಬರುತ್ತದೆ. 1994-95 ರಿಂದ 1998-99 ರವರಿಗೆನ ಕೈಬರಹ ಪಹಣಿಯನ್ನು ಗಮನಿಸಿದಾಗ, ಅಗಸರ ಬುಳ್ಳಪ್ಪ, ಬಡಿಗೇರ ಕಾಳಿಂಗಪ್ಪ ಇವರ ಹೆಸರು ಮಾಲಿಕರ ಕಲಂನಲ್ಲಿ ದಾಖಾಲೆಯಾಗಿದ್ದು, ಅಗಸರ ಸಂಕಮ್ಮ ಗಂಡ ಅಗಸರ ಸೋಮಪ್ಪ ಇವಳ ಹೆಸರು 1998-99 ರಲ್ಲಿ ಕ್ಷೇತ್ರ 3 ಎಕರೆ ಸಂಬಂದಿಸಿದಂತೆ ದಾಖಾಲೆಯಾಗಿರುವುದು ಕಂಡಬರುತ್ತದೆ ಮತ್ತು ಹನುಮಂತಪ್ಪ ಇತನ ಹೆಸರು ಮಾಲಿಕರ ಕಲಂನಿಂದ ಕಡಿಮೆ ಮಾಡಿರುವುದು ಕಂಡುಬರುತ್ತದೆ ಮತ್ತು ಅಗಸರ ಪುಟ್ಟವ್ವ, ಬಡಿಗೇರ ಕಾಳಿಂಗಪ್ಪ ಇವರ ಹೆಸರು ಸಾಗುವಳಿ ಕಲಂನಲ್ಲಿ ಕಂಡುಬರುತ್ತದೆ.

13. ಸನ್ 1999 ರಿಂದ 2000 ರಿಂದ 2001-02 ವರಗಿನ ಪಹಣಿಯನ್ನು ಗಮನಿಸಿದಾಗ, ಅಗಸರ ಬುಳ್ಳಪ್ಪ ಇತನ ಹೆಸರು ಕ್ಷೇತ್ರ 1.74 ಎಕರೆ ಸಂಬಂದಿಸಿದಂತೆ ದುಂಡು ಸುತ್ತಿ ಮಾಲಿಕರ ಕಲಂನಿಂದ ಕಡಿಮೆ ಮಾಡಿದ್ದು, ಬಡಿಗೆರೆ ಕಾಳಿಂಗಪ್ಪ ಇತನ ಹೆಸರು ಕ್ಷೇತ್ರ 2.62 ಎಕರೆಗೆ ಸಂಬಂದಿಸಿದಂತೆ, ಅಗಸರ ಸಂಕಮ್ಮ ಇವಳ ಹೆಸರು ಕ್ಷೇತ್ರ

1.26 ಎಕರೆಗೆ ಸಂಬಂದಿಸಿದಂತೆ ದಾಖಾಲೆಯಾಗಿದ್ದು, ಕ್ಷೇತ್ರ 3 ಎಕರೆ ಎನ್ನುವುದನ್ನು ಮಾಲಿಕರ ಕಲಂನಲ್ಲಿ ದುಂಡು ಸುತ್ತಿರುವುದು ಕಂಡುಬರುತ್ತದೆ, ಮತ್ತು ಅಗಸರ ಬುಳ್ಳಪ್ಪ, ಬಡಿಗೇರ ಕಾಳಿಂಗಪ್ಪ ಮತ್ತು ಸಂಕಮ್ಮ ಇವರ ಹೆಸರು ಸಾಗುವಳಿದಾರರ ಕಲಂನಲ್ಲಿ ಕಂಡುಬರುತ್ತದೆ ಮತ್ತು 2001-2002 ನೇ ಸಾಲಿನಲ್ಲಿ ಬಡಿಗೇರ ಕಾಳಿಂಗಪ್ಪ ಇತನ ಹೆಸರು 2.62 ಎಕರೆಗೆ ಸಂಬಂದಿಸಿಂತೆ, ಸಂಕಮ್ಮ ಹೆಸರು 1.26 ಎಕರೆಗೆ ಸಂಬಂದಿಸಿದಂತೆ ಅಗಸರ ಸೊಮಪ್ಪ ಇತನ ಹೆಸರು ಕ್ಷೇತ್ರ 1.74 ಎಕರೆ ಸಂಬಂದಿಸಿದಂತೆ ಮತ್ತು ಅಗಸರ ಇರಿಯಮ್ಮ ಇವಳ ಕ್ಷೇತ್ರ 1.74 ಎಕರೆ ಸಂಬಂದಿಸಿದಂತೆ ಮಾಲಿಕರ ಮತ್ತು ಸ್ವಾಧಿನದಾರರ ಕಲಂನಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಪ್ರತಿವಾದಿಯವರು ಕ್ಷೇತ್ರ 4.74 ಎಕರೆ ಒಟ್ಟು ಕುಟುಂಬದ ಆಸ್ತಿ ಎಂದು ಹೇಳುತ್ತಾರೆ.

14. ವಾದಿಯು ಹಾಜರುಪಡಿಸಿದ ದಾಖಲೆಯಾದ ಎಂ ಅರ್ ನಂ 14/1997-98 ನೇದ್ದನ್ನು ಗಮನಿಸಿದಾಗ, ಸಂಕಮ್ಮ ಗಂಡ ಆಗಸರ ಸೋಮಪ್ಪ ಇವಳು ತನ್ನ ತಂದೆಯಾದ ಅಗಸರ ಹನುಮಂತಪ್ಪ ಇತನು ಪೋತಿಯಾದ 8-10 ವರ್ಷಗಳ ನಂತರ ಪೋತಿ ವಾರಸು ಪ್ರಕಾರ ಏಕೈಕ ವಾರಸುದಾರಳಾದ ತನ್ನ ಹೆಸರಿನಲ್ಲಿ ಖಾತಾ ಬದಲಾವಾಣೆ ಮಾಡಲು ತಹಶೀಲ್ದಾರ ಹರಪನಹಳ್ಳಿ ಇವರಿಗೆ ಮನವಿ ಸಲ್ಲಿಸಿದರ ಮೇರೆಗೆ ಕ್ಷೇತ್ರ 3 ಎಕರೆ ಜಮೀನನ್ನು ಸಂಕಮ್ಮಳ ಹೆಸರಿನಲ್ಲಿ ಮುಟೇಶನ್ ಅಗಿರುವುದು ಕಂಡುಬರುತ್ತದೆ. ವಾದಿಯ ಪ್ರಕಾರ ದಾವಾ ಸರ್ವೆ ನಂಬರನಲ್ಲಿ 3 ಎಕರೆ ತನ್ನ ತಂದೆಗೆ ಸಂಬಂದಿಸಿದ್ದು ಎಂದು ಹೇಳುತ್ತಾರೆ. ಪ್ರತಿವಾದಿಯವರ ಪ್ರಕಾರ ವಾದಿ ಮತ್ತು ಪ್ರತಿವಾದಿಯವರ ಮೂಲಪುರಷ ಹನುಮಂತಪ್ಪ ಇತನಿಗೆ ಅಗಸರ ಸೋಮಪ್ಪ ಬೀನ್ ಹನುಮಂತಪ್ಪ, ಅಗಸರ ದೊಡ್ಡ ಬುಳ್ಳಪ್ಪ ಬಿನ್ ಹನುಮಂತಪ್ಪ ಅಗಸರ ಸಣ್ಣ ಬುಳ್ಳಪ್ಪ, ಬಿನ್ ಹನುಮಂತಪ್ಪ ಮತ್ತು ಅಗಸರ ನಾಗಪ್ಪ ಬಿನ್ ಹನುಮಂತಪ್ಪ ಎನ್ನುವ ನಾಲ್ಕು ಜನ ಗಂಡು ಮಕ್ಕಳಿದ್ದು, ದಾವಾ ಸರ್ವೆ ನಂಬರ್ ಪೈಕಿ 3 ಎಕರೆ ಜಮೀನು ಸೋಮಪ್ಪನ ಹೆಸರಿಗೆ ಬಂದಿದ್ದು, ಸದರಿ ಸೋಮಪ್ಪನು ಕೆಟ್ಟಚಟಗಳಿಂದ ಬಲಿಯಾಗಿದ್ದರಿಂದ ಸದರಿ ಆಸ್ತಿಯನ್ನು ಮಾರಟ ಮಾಡಿ ಹಾಳುಮಾಡುತ್ತಾನೆಂದು ಅಗಸರ

ಹನುಮಂತಪ್ಪನ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸಂಕಮ್ಮಳು 1ನೇ ಪ್ರತಿವಾದಿಯ ತಂದೆಯ ಎರಡನೆಯ ಹೆಂಡತಿ ಇದ್ದು, 1ನೇ ಪ್ರತಿವಾದಿಯ ಸಮ್ಮತಿಯ ಮೇರಗೆ ಕ್ಷೇತ್ರ 3 ಎಕರೆ ಜಮೀನನ್ನು ಸಂಕಮ್ಮಳ ಹೆಸರಿನಲ್ಲಿ ಖಾತೆ ಮಾಡಿದ್ದು ಇರುತ್ತದೆ, ಸದರಿ ಅವಳಿಗೆ 3 ಎಕರೆ ಮೇಲೆ ಸಂಪುರ್ಣ ಹಕ್ಕು ಇರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಮೇಲ್ಕಣಿಸಿದ ಎಲ್ಲಾ ಸಂಗತಿಗಳು ಇತ್ಯರ್ಥವಾಗಬೇಕಾದರೆ ಸಂಪುರ್ಣ ವಿಚಾರಣೆ ಅತ್ಯಗತ್ಯವಾಗಿರುತ್ತದೆ. ಈ ಹಂತದಲ್ಲಿ ಸಂಪೂರ್ಣ ವಿಚಾರಣೆ ಮಾಡಲಾಗುವುದಿಲ್ಲ. ವಾದಿ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ದಾವಾಆಸ್ತಿಯು ಮೇಲ್ನೋಟಕ್ಕೆ ವಾದಿಯ ಸ್ವಾಧೀನದಲ್ಲಿರುವುದು ಕಂಡುಬರುತ್ತದೆ. ದಾವಾಆಸ್ತಿಯು ವಾದಿಯ ಸ್ವಾಧೀನದಲ್ಲಿದೆ ಎಂದು ತೋರಿಸಲು ಪೂರಕವಾದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಆದ್ದರಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಆದೇಶಿಸುವ ಮೂಲಕ ಪ್ರತಿವಾದಿಯನ್ನು ತಡೆಯುವುದು ಅವಶ್ಯಕವಾಗಿರುತ್ತದೆ. **ಆದ್ದರಿಂದ ಸದರಿ ಅಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**15.** ಅಂಶ ನಂ.4: ಅಂಶ ನಂ. 1 ರಿಂದ 3 ಕ್ಕೆ ನೀಡಿದ ಕಾರಣ ಹಾಗೂ ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಅರ್ಜಿದಾರ/ವಾದಿ ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ--39 ನಿಯಮ 1 ಮತ್ತು 2 ಸಹ ಕಲಂ-151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಲಾಗಿದೆ.

ದಾವಾ ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನನ್ನು 1 ರಿಂದ 6 ನೇ ಪ್ರತಿವಾದಿಗಳಾಗಲಿ, ಅಥವಾ ಪ್ರತಿವಾದಿಗಳ ಪರ ಜಿ.ಪಿ.ಎ ಹೊಲ್ಡರಗಳಾಗಲೀ, ಅವರ ಪರ ಇನ್ನಿತರೆ ಯಾರೆಯಾಗಲೀ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ

ಅಡ್ಡಿಪಡಿಸದಂತೆ ಸದರಿ ದಾವೆಯು ಇತ್ಯರ್ಥವಾಗುವವರೆಗೂ ಏಕಪಕ್ಷೀಯ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದೆ.

ಖರ್ಚಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಪಿಗಾರನಿಗೆ ನೇರವಾಗಿ ಕಂಪ್ಯೂಟರ ಮೇಲೆ ಉಕ್ತಲೇಖನವನ್ನು ಕೊಟ್ಟು ಅವರಿಂದ ಬೆರಳಚ್ಚುಪಡಿಸಿ ಅದನ್ನು ಓದಿ ತಿದ್ದಿ ನಂತರ ನನ್ನ ಸಹಿಯನ್ನು ಹಾಕಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕಃ *7* **ನೇ ಆಗಸ್ಟ್** 2023 ರಂದು ಉಚ್ಚರಿಸಲಾಯಿತು).

**(ಶ್ರೀಮತಿ ಫಕೀರವ್ವ ಕೆಳಗೇರಿ)**
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.,ಹರಪನಹಳ್ಳಿ